ದಿನಾಂಕ: 07.01.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀಮತಿ ಸುಮಲತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಎಸ್.ಡಬ್ಲ್ಯೂಎಂ]
3. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 99
4. ಶ್ರೀ ನಾಗರಾಜ್. ಕೆ.ಬಿ. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ.
5. ಶ್ರೀ ಸಂತೋಷ್, ಹಿರಿಯ ಆರೋಗ್ಯ ಪರಿವೀಕ್ಷಕರು,
6. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ
7. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
8. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ ಡಿ. ಅನಂದ್. ಸದಸ್ಯರು
10. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
11. ಶ್ರೀ ಉಮೇಶ್, ಸದಸ್ಯರು,
12. ಶ್ರೀ ಎಸ್. ರಾಜಣ್ಣ. ಸದಸ್ಯರು
13. ಶ್ರೀ ಎನ್. ಮಂಜುನಾಥ್, ಸದಸ್ಯರು,
14. ಶ್ರೀ ರಾಕೇಶ್, ಸದಸ್ಯರು,

ದಿನಾಂಕ: 07.01.2021ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ **ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ** ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಸಿಲ್ಟ್ ಅಂಡ್ ಟ್ರಾಕ್ಟರ್ ಹಾಗೂ ಜೆ.ಸಿ.ಬಿ.ಯನ್ನು ಬಳಸಿ ಬಾಕಿ ಉಳಿದಿರುವ ಒರಳು ಕಲ್ಲುಗಳನ್ನು ತೆರವುಗೊಳಿಸುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಕ್ರಮ ವಹಿಸುವಂತೆ ಸೂಚಿಸಿದರು.
4. ಮಾನ್ಯ ಆಯುಕ್ತರ ಸುತ್ತೋಲೆಯಂತೆ ರಸ್ತೆಯ ನಾಮಫಲಕಗಳಲ್ಲಿ ಇರುವ ಭಾವ ಚಿತ್ರಗಳನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಚರ್ಚಿಸಲಾಯಿತು. ಆದರೆ ತೆರವುಗೊಳಿಸದೆ ಇರುವುದರಿಂದ ಮತ್ತೊಮ್ಮೆ ಭಾವಚಿತ್ರಗಳನ್ನು ತೆರವುಗೊಳಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು.
5. ವಾರ್ಡಿನಲ್ಲಿ ಎರಡು ಶುದ್ಧ ನೀರಿನ ಘಟಕವನ್ನು ನಿರ್ಮಾಣ ಮಾಡಿದ್ದು, ಸದರಿ ನೀರಿನ ಘಟಕವನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರೆಯಲು ಕ್ರಮ ವಹಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು.
6. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ರಸ್ತೆಯಲ್ಲಿ ಬಾಕಿ ಉಳಿದಿರುವ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಕ್ರಮ ವಹಿಸಲು ಸೂಚಿಸಲಾಯಿತು.
7. 2020-21ನೇ ಸಾಲಿನ ಸಿಲ್ಟ್ ಅಂಡ್ ಟ್ರಾಕ್ಟರ್‌ಗೆ ಸಂಬಂಧಪಟ್ಟ ಕಡತವು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿದ್ದು, ಅದನ್ನು ಅನುಮೋದಿಸಿ, ತುರ್ತಾಗಿ ಜಾಬ್ ಕೋಡ್ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಪು.ತಿ.ನೋ.**

Scanned with CamScanner

8. ವಾರ್ಡ್ ಕಮಿಟಿ ಸಭೆಗೆ ಹಾಜರಾಗಲು ಉಪತಹಶೀಲ್ದಾರ್, ಪಶುಪಾಲನಾ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ವಿದ್ಯುತ್ [ಪಶ್ಚಿಮ] ರವರಿಗೆ ಪತ್ರ ಬರೆಯಲು ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
9. ಪಾದಚಾರಿ ಮಾರ್ಗ ಹಾಗೂ ಮೇಲು ಸೇತುವೆ ಕೆಳಗೆ ಹುಲ್ಲು ಬೆಳೆದಿದ್ದು, ತೆರವುಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
10. ವಾರ್ಡ್ ವ್ಯಾಪ್ತಿಯಲ್ಲಿ ತುಂಬಾ ದಿನಗಳಿಂದ ನಿಲ್ಲಿಸಿರುವ ವಾಹನಗಳ ಪಟ್ಟಿ ಮಾಡಿ ಸಂಚಾರಿ ಪೋಲಿಸ್ ಠಾಣೆ ರವರಿಗೆ ಮಾಹಿತಿ ನೀಡಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.
11. ನೋಡಲ್ ಅಧಿಕಾರಿಗಳು ಮಾತನಾಡುತ್ತಾ ತಳ್ಳುವ ಗಾಡಿಗಳಲ್ಲಿ /-ಅಂಗಡಿಗಳಲ್ಲಿ ವ್ಯಾಪಾರ ಮಾಡುವವರು ಪ್ಲಾಸ್ಟಿಕ್ ಬಳಸುತ್ತಿದ್ದು, ಸದರಿ ರವರಿಗೆ ದಂಡ ಹಾಕುವಂತೆ ಸೂಚಿಸಲಾಯಿತು.
12. ಹೊಸದಾಗಿ ನಿರ್ಮಾಣವಾಗಿರುವ ಶೌಚಾಲಯಗಳನ್ನು ನಿರ್ವಹಿಸಲು ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗಧಿಪಡಿಸಲು ಘನತ್ಯಾಜ್ಯ ಇಲಾಖೆಯವರಿಗೆ ಸೂಚಿಸಲಾಯಿತು.
13. ವಾರ್ಡಿನ ಕೆಲವು ರಸ್ತೆಗಳಲ್ಲಿ ವಾಟರ್ ಟ್ಯಾಂಕ್‌ಗಳು ಬಳಸದೇ ಅನುಪಯುಕ್ತವಾಗಿರುವುದರಿಂದ ಸದರಿ ಟ್ಯಾಂಕ್‌ಗಳನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
14. ವಾರ್ಡ್ ವ್ಯಾಪ್ತಿಯಲ್ಲಿ ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು. ಅದರಂತೆ ಅರಣ್ಯ ಇಲಾಖೆಯವರು ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುತ್ತಿದ್ದು, ಬಾಕಿ ಉಳಿದಿರುವ ಮರದ ಕೊಂಬೆಗಳನ್ನು ತುರ್ತಾಗಿ ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.
15. ಶ್ರೀ ಮಂಜುನಾಥ್, ವಾರ್ಡ್ ಕಮಿಟಿ ಸದಸ್ಯರು ರವರು ಮಾತನಾಡುತ್ತಾ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಕರೆ ಮಾಡಿದ ತಕ್ಷಣ ದೂರುಗಳಿಗೆ ಸ್ಪಂಧಿಸುತ್ತಿರುವುದರಿಂದ ಸದರಿ ರವರನ್ನು ಅಭಿನಂದಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned with CamScanner

ದಿನಾಂಕ: 21.01.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 99
3. ಶ್ರೀ ನಾಗರಾಜ್. ಕೆ.ಬಿ. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ
5. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
6. ಶ್ರೀ ಬಸವರಾಜು, ಆಹಾರ ನಿರೀಕ್ಷಕರು,
7. ಶ್ರೀ ಕಾಂತರಾಜು.ಎನ್. ಮುಖ್ಯ ಪೇದೆ, ವಿಜಯನಗರ ಸಂಚಾರಿ ಪೊಲೀಸ್ ಠಾಣೆ
8. ಶ್ರೀ ರಮೇಶ್, ಎಂ. ವಿಲೇಜ್ ಅಕೌಂಟೆಂಟ್, ಉಪತಹಶೀಲ್ದಾರ್, ನಾಡಕಛೇರಿ, ರಾಜಾಜಿನಗರ
9. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
10. ಶ್ರೀ ಶಿವಪ್ಪ, ಮಾರ್ಷಲ್
11. ಶ್ರೀ ಡಿ. ಅನಂದ್. ಸದಸ್ಯರು

9. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
10. ಶ್ರೀ ಉಮೇಶ್, ಸದಸ್ಯರು,
11. ಶ್ರೀ ಎಸ್. ರಾಜಣ್ಣ. ಸದಸ್ಯರು
12. ಶ್ರೀ ಎನ್. ಮಂಜುನಾಥ್, ಸದಸ್ಯರು,

ದಿನಾಂಕ: 21.01.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ **ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ** ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಶ್ರೀ ಉಮೇಶ್ ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಸಿಲ್ಟ್ ಅಂಡ್ ಟ್ರಾಕ್ಟರ್ ಟೆಂಡರ್ ಅವಧಿಯು ಮುಕ್ತಾಯವಾಗಿರುವುದರಿಂದ ಬೇರೆ ವ್ಯವಸ್ಥೆಯನ್ನು ಮಾಡಲು ಸಭೆಯಲ್ಲಿ ಕೋರಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಹಿಂದೆ ಇದ್ದ ಸಹಾಯಕ ಅಭಿಯಂತರರು ಟೆಂಡರ್ ನೀಡಿದ ನಂತರ ಒಂದು ವರ್ಷದಲ್ಲಿ 6 ತಿಂಗಳು ಮಾತ್ರ ಕೆಲಸ ನಿರ್ವಹಿಸಿದ್ದು, ಕರೋನ ರೋಗದಿಂದಂದಾಗಿ ಉಳಿದ 6 ತಿಂಗಳು ಕೆಲಸ ನಿರ್ವಹಿಸಿರುವುದಿಲ್ಲವೆಂದು ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ಕಾಮಗಾರಿಯನ್ನು ಮುಂದುವರೆಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.
4. ಮಾನ್ಯ ಆಯುಕ್ತರ ಸುತ್ತೋಲೆಯಂತೆ ರಸ್ತೆಯ ನಾಮಫಲಕಗಳಲ್ಲಿ ಇರುವ ಭಾವ ಚಿತ್ರಗಳನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡುತ್ತಾ, ಮುಂದಿನ ವಾರ್ಡ್ ಕಮಿಟಿ ಸಭೆಯೊಳಗೆ ನಾಮಫಲಕವನ್ನು ತೆರವುಗೊಳಿಸಲಾಗುವುದೆಂದು ತಿಳಿಸಿದರು.
5. ವಾರ್ಡಿನಲ್ಲಿ ಎರಡು ಶುದ್ದ ನೀರಿನ ಘಟಕವನ್ನು ನಿರ್ಮಾಣ ಮಾಡಿದ್ದು, ಸದರಿ ನೀರಿನ ಘಟಕವನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರೆಯಲು ಕ್ರಮ ವಹಿಸಲು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು.

**ಪು.ತಿ.ನೋ.**

Scanned with CamScanner

6. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಉಪತಹಶೀಲ್ದಾರ್ ರವರ ಕಛೇರಿಯಿಂದ ಹಾಜರಿದ್ದ ವಿಲೇಜ್ ಅಕೌಂಟೆಂಟ್ ರವರಿಗೆ ಮುಂದಿನ ಸಭೆಯಲ್ಲಿ ಈ ವಾರ್ಡಿಗೆ ಸಂಬಂಧಪಟ್ಟ ತಮ್ಮ ಕಛೇರಿಯಲ್ಲಿ ದಾಖಲಾಗಿರುವ ದೂರುಗಳ ಪಟ್ಟಿ, ವಿದವೆ ವೇತನ, ಸಕಾಲ ವ್ಯಾಪ್ತಿಗೆ ಬರುವ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಹಾಜರು ಪಡಿಸುವಂತೆ ತಿಳಿಸಿದರು.
7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಮಾನ್ಯ ಆಯುಕ್ತರ ಆದೇಶದಂತೆ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ಗುರುತಿಸಿ, ಪಟ್ಟಿ ಮಾಡಿ ನೀಡಲು ಕಾಮಗಾರಿ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಸೂಚಿಸಿದರು.
8. ಶ್ರೀ ಶಿವರಾಮಯ್ಯ, ಎ.ಎಸ್.ಐ. ಸಂಚಾರಿ ಪೋಲಿಸ್ ಠಾಣೆ ರವರು ಮಾತನಾಡುತ್ತಾ, ತುಂಬಾ ದಿನಗಳಿಂದ ಒಂದೇ ಸ್ಥಳದಲ್ಲಿ ಇರುವ ಹಳೇಯ ವಾಹನಗಳನ್ನು ಜಕ್ಕರಾಯನ ಕೆರೆಯ ಆವರಣಕ್ಕೆ ಸಾಗಿಸಲು ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಸದರಿ ಸ್ಥಳವು ಈಗಾಗಲೇ ಭರ್ತಿಯಾಗಿರುವುದಾಗಿ ಸಂಚಾರಿ ಪೋಲಿಸ್ ಆಯುಕ್ತರು ತಿಳಿಸಿರುವುದರಿಂದ ಬೇರೆ ಸ್ಥಳವನ್ನು ನೀಡಬೇಕಾಗಿ ಕೋರಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಪಾಲಿಕೆಯ ಖಾಲಿ ಜಾಗವು ಯಾವುದು ಇಲ್ಲದೆ ಇರುವುದರಿಂದ ಪಿ ಅಂಡ್ ಟಿ ರಸ್ತೆಯಲ್ಲಿ ನಿಲುಗಡೆಗೊಳಿಸಲು ಸಭೆಯಲ್ಲಿ ತಿಳಿಸಿದರು.
9. ಕಂದಾಯ ಇಲಾಖೆ ರವರು ಮಾತನಾಡುತ್ತಾ, ನಮ್ಮ ಕಛೇರಿಯಲಿ ಸಕಾಲದಡಿಯಲ್ಲಿ ಬರುವ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.
10. ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳ ಬಗ್ಗೆ ಅವರಿಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಪತ್ರವನ್ನು ಬರೆಯಲು ನೋಡಲ್ ಅಧಿಕಾರಿಗಳು ಕಾರ್ಯದರ್ಶಿಗಳಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned with CamScanner

4. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಕಾಮಗಾರಿಯ ಸಮಯದಲ್ಲಿ ಅಡ್ಡಲಾಗಿ ಬರುವ ಮರದ ಕೊಂಬೆಗಳನ್ನು ತೆರವುಗೊಳಿಸಿ, ಕಾಮಗಾರಿಗೆ ಅನುವು ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

5. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಗಳು ಹೆಚ್ಚಾಗಿದ್ದು, ಸದರಿ ನಾಯಿಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ವೆಟರ್ನರಿ ಇನ್ಸ್‌ಪೆಕ್ಟರ್ ರವರು ನಾಯಿಗಳನ್ನು ಹಿಡಿಯಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

6. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ ಇವರು ಕೆಲವು ಕಿಡಿಗೇಡಿಗಳು ಮುಖ್ಯ ರಸ್ತೆಗಳಲ್ಲಿ ವೀಲಿಂಗ್ ಮಾಡುತ್ತಿರುವುದರಿಂದ ಸಾರ್ವಜನಿಕರ ಪ್ರಾಣ ಹಾನಿಯಾಗುವ ಸಂಭವವಿರುವುದರಿಂದ ಅಂತಹವರನ್ನು ರಸ್ತೆಗಳಲ್ಲಿ ಕಂಡಾಗ ಛಾಯ ಚಿತ್ರಗಳನ್ನು ತೆಗೆದು ಪೋಲಿಸ್ ಇಲಾಖೆಗೆ ನೀಡಿದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

7. ಶ್ರೀ ಮಂಜುನಾಥ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, 40 ಮತ್ತು 39ನೇ ಕ್ರಾಸ್, ರಾಜಾಜಿನಗರ ಇಲ್ಲಿ ನೀರಿ ಸರಿಯಾಗಿ ಬರದೇ ಇರುವುದರಿಂದ ಇಲ್ಲಿನ ನಾಗರೀಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಶ್ರೀ ನರಸಿಂಹ ಮೂರ್ತಿ , ಕೆಲಸ ಪರಿವೀಕ್ಷಕರು ಮಾತನಾಡುತ್ತಾ ಸದರಿ ರಸ್ತೆಗಳಲ್ಲಿ ನೀರಿನ ಬಿಲ್ಲುಗಳನ್ನು ಪರಿಶೀಲಿಸಲಾಗಿ **30000.00** ಲೀಟರ್ ನಿಂದ **40000.00** ಸಾವಿರ ಲೀಟರ್ ವರೆಗೆ ನೀರು ಸರಬರಾಜು ಆಗಿರುವುದು ಕಂಡು ಬಂದಿರುವುದರಿಂದ ಸದರಿ ಪ್ರದೇಶದಲ್ಲಿ ಯಾವುದೇ ನೀರಿನ ಸಮಸ್ಯೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು.

8. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಕಳೆದ 5 ವರ್ಷಗಳಲ್ಲಿ ಯಾವುದೇ ಒಂಟಿ ಮನೆಗಳಿಗೆ ಹಣ ಪಾವತಿಯಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡಿಗೆ ಸಂಬಂಧಪಟ್ಟ ಒಂಟಿ ಮನೆಯ ಅಂಕಿ ಅಂಶಗಳು ಹಾಗೂ ಅದಕ್ಕೆ ಪಾವತಿಯಾಗಿರುವ ಹಣದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಕಾಮಗಾರಿ ಇಲಾಖೆಯವರಿಗೆ ತಿಳಿಸಿದರು.

9. ಶ್ರೀ ಉಮೇಶ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಹಳೇಯ ವಿದ್ಯುತ್ ಕಂಬಗಳು ಕೆಲವು ರಸ್ತೆಗಳಲ್ಲಿ ತುಂಬಾ ದಿನಗಳಿಂದ ಬಿದ್ದಿರುವುದರಿಂದ ಸಾರ್ವಜನಿಕರು ಅದರ ಮೇಲೆ ಕಸ ಹಾಗೂ ಡೆಬ್ರಿಸ್ ಹಾಕುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ, ಸಹಾಯಕ ಅಭಿಯಂತರರು, ಬೆಸ್ಕಾಂ, ರವರು ಸದರಿ ಕಂಬಗಳನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

10. ಶ್ರೀ ಆನಂದ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರ, ಎಲ್.ಐ.ಸಿ. ಕಾಲೋನಿ, 3ನೇ ಮುಖ್ಯರಸ್ತೆ, ಮತ್ತು ಜೆ.ಸಿ. ಬೇಕರಿ ಸುತ್ತಮುತ್ತ ಬೀದಿ ದೀಪಗಳು ಸರಿಯಾಗಿ ಉರಿಯದೆ ಇರುವುದರಿಂದ ರಾತ್ರಿ ಸಮಯದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಹಾಳಾಗಿರುವ ಬೀದಿ ದೀಪಗಳನ್ನು ದುರಸ್ಥಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರು, ವಿದ್ಯುತ್ ರವರು ದುರಸ್ಥಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

11. ಶ್ರೀ ಅಶೋಕ್‌ರಾವ್, ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಮಂಜುನಾಥನಗರದಲ್ಲಿ ದೊಡ್ಡ ಮಳೆ ನೀರು ಚರಂಡಿಯ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿದ್ದು, ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸುವಂತೆ ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂಡಿ ರವರು ಕಾಮಗಾರಿಯನ್ನು ಆದಷ್ಟು ಬ್ಹೇಗನೆ ಮುಗಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned with CamScanner

ದಿನಾಂಕ: 11.02.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು,
3. ಶ್ರೀಮತಿ ರೇಶ್ಮ, ಸಹಾಯಕ ಅಭಿಯಂತರರು, ಎಸ್.ಡ್ಬ್ಲ್ಯೂ.ಡಿ.
4. ಶ್ರೀ ಆನಂದ್, ಸಹಾಯಕ ಅಭಿಯಂತರರು, ಬೆಸ್ಕಾಂ,
5. ಶ್ರೀಮತಿ ಬೃಂದಾಗೌಡ, ಸಹಾಯಕ ಅಭಿಯಂತರರು, ವಾರ್ಡ್ ನಂ. 99
6. ಶ್ರೀ ಜಮೀಲ್, ಕಿರಿಯ ಅಭಿಯಂತರರು, ವಿದ್ಯುತ್ [ಪಶ್ಚಿಮ]
7. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ
8. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
9. ಶ್ರೀ ರಮೇಶ್, ಪಶು ಸಂಘೋಪನ ಇಲಾಖೆ,
10. ಶ್ರೀ ಶ್ರೀನಾಥ್, ಅರಣ್ಯ ಇಲಾಖೆ
11. ಶ್ರೀ ನರಸಿಂಹ ಮೂರ್ತಿ ಕೆಲಸ ಪರಿವೀಕ್ಷಕರು, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
12. ಶ್ರೀ ವೆಂಕಟೇಶ್, ಕಂದಾಯ ವಸೂಲಿಗಾರರು
13. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
14. ಶ್ರೀ ಡಿ. ಅನಂದ್. ಸದಸ್ಯರು
15. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
16. ಶ್ರೀ ಉಮೇಶ್, ಸದಸ್ಯರು,
17. ಶ್ರೀ ಎನ್. ಮಂಜುನಾಥ್, ಸದಸ್ಯರು,
18. ಶ್ರೀ ಅಶೋಕ್‌ರಾವ್, ಸದಸ್ಯರು

ದಿನಾಂಕ: 11.02.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಶ್ರೀ ಉಮೇಶ್, ಶ್ರೀ ಶ್ರೀನಿವಾಸ್, ಶ್ರೀ ಮಂಜುನಾಥ್, ವಾರ್ಡ್ ಕಮಿಟಿ ಸದಸ್ಯರುಗಳು ಮಾತನಾಡುತ್ತಾ, ಪಶ್ಚಿಮ ಕಾರ್ಡ್ ರಸ್ತೆಯ ಸರ್ವಿಸ್ ರಸ್ತೆಯಿಂದ ಮಂಜುನಾಥನಗರ 1ನೇ ಮುಖ್ಯ ರಸ್ತೆಗೆ ಸೇರುವ ರಸ್ತೆಯು ತುಂಬಾ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುತ್ತದೆ. ಆದುದರಿಂದ ಸದರಿ ರಸ್ತೆಯಲ್ಲಿ ನವರಂಗ್ ಬ್ರಿಡ್ಜ್‌ನಿಂದ ಶಿವನಗರ ಸಿಗ್ನಲ್ ವರೆಗೆ ರಸ್ತೆ ಬದಿಯಲ್ಲಿರುವ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈ ಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಿದಲ್ಲಿ ರಸ್ತೆ ಅಗಲೀಕರಣ ಮಾಡಲು ಸಹಾಯವಾಗುವುದರಿಂದ ಸದರಿ ರಸ್ತೆಯಲ್ಲಿ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಬೇಕೆಂದು ಸಭೆಯಲ್ಲಿ ಕೋರಿದರು. ಇದರ ಬಗ್ಗೆ ಉಳಿದ ವಾರ್ಡ್ ಕಮಿಟಿ ಸದಸ್ಯರು ಸಹ ಮಾತನಾಡುತ್ತಾ ಈಗಾಗಲೇ ಸದರಿ ರಸ್ತೆಯಲ್ಲಿ ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಕಾರ್ಯವು ಪ್ರಗತಿಯಲ್ಲಿರುವುದರಿಂದ ಈ ರಸ್ತೆಯಲ್ಲಿ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಸ್ಥಳಾಂತರಿಸಿದಲ್ಲಿ ಮುಂದಿನ ದಿನಗಳಲ್ಲಿ ರಸ್ತೆ ಅಗಲೀಕರಣ ಮಾಡಲು ಸಹಾಯವಾಗುವುದೆಂದು ಸರ್ವಾನು ಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು, ಸದರಿ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಭೆಯಲ್ಲಿ ಟ್ರಾನ್ಸ್ ಫಾರ್ಮರ್ ಸ್ಥಳಾಂತರಿಸುವ ಬಗ್ಗೆ ತೀರ್ಮಾನವಾಗಿರುವುದರಿಂದ ಸಭೆಯಲ್ಲಿ ಹಾಜರಿದ್ದ ಶ್ರೀ ಆನಂದ್, ಸಹಾಯಕ ಅಭಿಯಂತರರು, ರವರಿಗೆ ಸಭೆಯ ನಿರ್ಣಯವನ್ನು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ, ತುರ್ತಾಗಿ ಪಶ್ಚಿಮ ಕಾರ್ಡ್ ರಸ್ತೆಯ, ಸರ್ವಿಸ್ ರಸ್ತೆಯಲ್ಲಿ ಬರುವ ನವರಂಗ್ ಬ್ರಿಡ್ಜ್‌ನಿಂದ ಶಿವನಗರ ಸಿಗ್ನಲ್ ವರೆಗೆ ಬರುವ ಎಲ್ಲಾ ಟ್ರಾನ್ಸ್ ಫಾರ್ಮರ್‌ಗಳನ್ನು ಫ್ಲೈಓವರ್ ಕಟ್ಟಡದ ಪಕ್ಕಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

Scanned with CamScanner